# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **250** |
| ಸದಸ್ಯರ ಹೆಸರು | : | ಶ್ರೀ. ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **16/07/2024** |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪ ಮಹಾಪೌರರು/ ಅಧ್ಯಕ್ಷ/ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ಗೌರವಧನ ಎಷ್ಟು; ಗೌರವಧನವನ್ನು ಪರಿಷ್ಕರಿಸುವ ಕುರಿತು ಸರ್ಕಾರ ಕೈಗೊಂಡ ನಿಲುವೇನು; (ಸಂಪೂರ್ಣ ಮಾಹಿತಿ ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು / ಉಪ ಮಹಾಪೌರರು / ಅಧ್ಯಕ್ಷ / ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ಗೌರವಧನದ ವಿವರಗಳ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ನ್ನು ಅನುಬಂಧ–1 ರಲ್ಲಿ ಒದಗಿಸಿದೆ.<br><br>ಗೌರವಧನವನ್ನು ಪರಿಷ್ಕರಿಸುವುದಕ್ಕಾಗಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ದಿನಾಂಕ:02/05/2023 ಮತ್ತು ದಿ:23/01/2024 ರಂದು ತಿರಸ್ಕರಿಸಿರುತ್ತದೆ. ಪ್ರಸ್ತುತ ಗೌರವಧನ ಪರಿಷ್ಕರಣೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. |
| ಆ | ಮಹಾನಗರಪಾಲಿಕೆ, ನಗರಸಭೆಗಳು, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಸ್ಥಾಯಿ ಸಮಿತಿ ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಸಭಾ ಭತ್ಯೆಯನ್ನು ಪರಿಷ್ಕರಿಸಲು ಸರ್ಕಾರ ಉದ್ದೇಶಿಸಿದೆಯೇ; ಇದ್ದಲ್ಲಿ, ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; | |
| ಇ | ಸರ್ಕಾರದ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರಲ್ಲಿ ಮುಂದಿನ ಐದು ವರ್ಷಗಳವರೆಗೆ ಗೌರವಧನವನ್ನು/ ಭತ್ಯೆಯನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ ಎಂಬ ಷರತ್ತಿನ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುವುದರಿಂದ ಗೌರವಧನ/ಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರದ ನಿಲುವೇನು; | |

| | | |
|---|---|---|
| ಈ | ಆಡಳಿತದಲ್ಲಿ ಪಾರದರ್ಶಕತೆ, ಜನರ ಸಹಭಾಗಿತ್ವ ತರಲು ಗ್ರಾಮ ಪಂಚಾಯಿತಿಗಳಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಡೆಸುವಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಈ ರೀತಿಯ ಸಭೆಗಳನ್ನು ಆಯೋಜಿಸುವ ಬಗ್ಗೆ ಸರ್ಕಾರದ ನಿಲುವೇನು? (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ 2020 ನ್ನು ರಚಿಸುವ ಮೂಲಕ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್–80 ಕ್ಕೆ ಅಗತ್ಯ ಸೇರ್ಪಡೆಗಳನ್ನು ಮಾಡಿ ಪ್ರದೇಶ ಸಭಾ, ನೆರೆಹೊರೆ ಗುಂಪು ರಚನೆ, ವಾರ್ಡು ಸಮಿತಿ ರಚನೆ ಮತ್ತು ಪ್ರಕಾರ್ಯಗಳ ಕುರಿತು ವಿವರಿಸಲಾಗಿರುತ್ತದೆ. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದು ಸಮಿತಿಗಳ ರಚನೆಗೆ ಅಗತ್ಯ ಕ್ರಮವಹಿಸಲು ಕೋರಿರುತ್ತಾರೆ. ಅದರಂತೆ ನೆರೆಹೊರೆ ಗುಂಪು, ಏರಿಯಾಸಭಾ ಮತ್ತು ವಾರ್ಡ್ ಸಮಿತಿಗಳ ರಚನೆಗೆ ಆಯಾ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆಗಳಲ್ಲಿ ಕ್ರಮವಹಿಸಲಾಗುತ್ತದೆ. |

**ಸಂಖ್ಯೆ:ನಅಇ 36 ಎಲ್‌ಸಿಕ್ಯೂ 2024.**

(ರಹೀಂ ಖಾನ್)
**ಪೌರಾಡಳಿತ ಹಾಗೂ ಹಜ್ ಸಚಿವರು**

ಅನುಬಂಧ-1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು / ಉಪ ಮಹಾಪೌರರು / ಅಧ್ಯಕ್ಷ / ಉಪಾಧ್ಯಕ್ಷ ಮತ್ತು ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವ ಧನ ಹೆಚ್ಚಿಸುವ ಕುರಿತು.

ಓದಲಾಗಿದೆ: 1)ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂಎನ್‌ಇ 98, ದಿನಾಂಕ:09.03.1999.

2)ಸರ್ಕಾರದ ಆದೇಶ ಸಂಖ್ಯೆ:ನಅಇ 114 ಎಂಎಲ್‌ಆರ್ 2002 ದಿನಾಂಕ:03.05.2005.

3)ಸರ್ಕಾರದ ಆದೇಶ ಸಂಖ್ಯೆ:ನಅಇ 94 ಎಂಎಲ್‌ಆರ್ 2010 ದಿನಾಂಕ:31.08.2010.

4)ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ.

5)ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಕಚೇರಿಯ ಪತ್ರಸಂಖ್ಯೆ:ಪೌನಿ/ಇತರೆ/ಸಿಆರ್/46/2015-16, ದಿನಂಕ:11.08.2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) (2) ಮತ್ತು (3)ರ ಆದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ ಮಾಸಿಕ ಗೌರವಧನವನ್ನು ನಿಗಧಿಪಡಿಸಿ/ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (4) ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ ಹಾಗೂ ಮೇಲೆ ಓದಲಾದ (5)ರ ನಿರ್ದೇಶಕರು, ಪೌರಾಡಳಿತ ನಿರ್ದೇಶನಲಯ, ಬೆಂಗಳೂರು ಇವರ ಪ್ರಸ್ತಾವನೆಯಲ್ಲಿ, ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪ ಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಮಾಸಿಕ ಗೌರವ ಧನವನ್ನು ಹೆಚ್ಚಿಸಲು ಹಾಗೂ ಪ್ರಸ್ತಾವನೆಯನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ಪರಿಷ್ಕರಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ನಅಇ 156 ಎಂಎಲ್‌ಆರ್ 2015, ದಿ:15.09.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

| ಕ್ರ ಸಂ | ಹುದ್ದೆ | ಪರಿಷ್ಕೃತ ಗೌರವಧನ (ರೂ. ಗಳಲ್ಲಿ) |
|---|---|---|
| | ಮಹಾನಗರಪಾಲಿಕೆ | |
| 1. | ಮಹಾಪೌರರು | 16,000/- |
| 2. | ಉಪ ಮಹಾಪೌರರು | 10,000/- |
| 3. | ಸದಸ್ಯರು | 6,000/- |
| 4. | ಸ್ಥಾಯಿ ಸಮಿತಿ ಸದಸ್ಯರು | 400/- (ಮಾಸಿಕ ರೂ. ೮೦೦-೦೦ ಮೀರದಂತೆ) |

Scanned with OKEN Scanner

| | | |
|---|---|---|
| | **ನಗರಸಭೆಗಳು** | |
| 1. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 12,000/– |
| 2. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 8,000/– |
| 3. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 4,000/– |
| 4. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 8,000/– |
| 5. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 4,000/– |
| 6. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 2,000/– |
| 7. | ಸ್ಥಾಯಿ ಸಮಿತಿ ಸದಸ್ಯರು | 400/–<br>(ಮಾಸಿಕ ರೂ.800-00 ಮೀರದಂತೆ) |
| | **ಪುರಸಭೆಗಳು** | |
| 1. | ಅಧ್ಯಕ್ಷರು | 4,800/– |
| 2. | ಉಪಾಧ್ಯಕ್ಷರು | 2,400/– |
| 3. | ಸದಸ್ಯರು | 1,200/– |
| 4. | ಸ್ಥಾಯಿ ಸಮಿತಿ ಸದಸ್ಯರು | 300/–<br>(ಮಾಸಿಕ ರೂ.600-00 ಮೀರದಂತೆ) |
| | **ಪಟ್ಟಣ ಪಂಚಾಯಿತಿ** | |
| 1. | ಅಧ್ಯಕ್ಷರು | 3,200/– |
| 2. | ಉಪಾಧ್ಯಕ್ಷರು | 1,600/– |
| 3. | ಸದಸ್ಯರು | 800/– |
| 4. | ಸ್ಥಾಯಿ ಸಮಿತಿ ಸದಸ್ಯರು | 200/–<br>(ಮಾಸಿಕ ರೂ.400-00 ಮೀರದಂತೆ) |

**<u>ಷರತ್ತುಗಳು:</u>**

1. ಈ ಗೌರವಧನದ ವೆಚ್ಚವನ್ನು ಆಯಾಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು. ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
2. ಸ್ಥಾಯಿ ಸಮಿತಿ ಸದಸ್ಯರು, ಪ್ರತಿ ತಿಂಗಳಿಗೆ ಗರಿಷ್ಠ ಎರಡು ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ.
3. ಮುಂದಿನ ಐದು ವರ್ಷದವರೆಗೆ ಗೌರವಧನವನ್ನು/ಭತ್ಯೆಗಳನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ.

Scanned with OKEN Scanner

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 674 ಸೇ–3/2016 ದಿನಾಂಕ:02.08.2016ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
15/9/16
(ಸಿದ್ದಿಕ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
15/9

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸ ಸೌಧ ಬೆಂಗಳೂರು– ಮುಂದಿನ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 250 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಲಾಗಿದೆ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಯೂ.ಐ.ಡಿ.ಎಫ್.ಸಿ. ಬೆಂಗಳೂರು.
6. ಆಯುಕ್ತರು, ಎಲ್ಲಾ ಮಹಾನಗರಪಾಲಿಕೆಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ.
9. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
11. ಎಲ್ಲಾ ಜಿಲ್ಲಾ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ.
12. ಎಲ್ಲಾ ನಗರಸಭೆಗಳ ಪೌರಾಯುಕ್ತರು.
13. ಎಲ್ಲಾ ಪುರಸಭೆಗಳ / ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with OKEN Scanner